## JANUARY 05, 2025

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- **ಬೀಜೋತ್ಪಾದನಾ ಕೇಂದ್ರ ಹಾಗೂ** ಗುಣಮಟ್ಟ ನಿರ್ಧರಣೆ ಪ್ರಯೋಗಾಲಯ ಬಲಪಡಿಸಲು, ಕೇಂದ್ರ ಕೃಷಿ ಸಚಿವರಿಗೆ, ರಾಜ್ಯದಿಂದ ಮನವಿ.
- **ಜಿಲ್ಲಾ ವಿಜ್ಞಾನ ಕೇಂದ್ರಗಳ ಅಭಿವೃದ್ಧಿಗೆ,** ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ, ಸಮಗ್ರ ಯೋಜನೆ.
- **ಬೆಂಗಳೂರು ಚಿತ್ರಕಲಾ ಪರಿಷತ್‌ನಲ್ಲಿ,** ಮುಖ್ಯಮಂತ್ರಿ ಇಂದು, 22ನೇ ಚಿತ್ರಸಂತೆಗೆ ಚಾಲನೆ.
- **ಇಂದು ರಾಷ್ಟ್ರೀಯ ಪಕ್ಷಿ ದಿನ;** ವಲಸೆ ಪಕ್ಷಿ ಮತ್ತು ಸ್ಥಳೀಯ ಹಕ್ಕಿಗಳ ವೀಕ್ಷಣೆಗೆ, ಹಲವೆಡೆ ವ್ಯವಸ್ಥೆ.

<><><>

**ಈಗ ವಾರ್ತೆಗಳ ವಿವರ**

<><><>

**ರಾಜ್ಯದ ಸರ್ಕಾರಿ ಬೀಜೋತ್ಪಾದನಾ ಕೇಂದ್ರಗಳು** ಮತ್ತು ಗುಣಮಟ್ಟ ನಿರ್ಧರಣೆ ಪ್ರಯೋಗಾಲಯಗಳನ್ನು ಬಲಪಡಿಸಲು, ಹೊಸ ಯೋಜನೆ ರೂಪಿಸಿ, ನೆರವು ನೀಡುವಂತೆ, ರಾಜ್ಯದ ಪರವಾಗಿ, ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಖಾತೆ ಸಚಿವ ಶಿವರಾಜ್‌ಸಿಂಗ್ ಚೌವ್ಹಾಣ್ ಅವರಿಗೆ, ರಾಜ್ಯದ ಕೃಷಿ ಖಾತೆ ಸಚಿವ ಎನ್.ಚಲುವರಾಯಸ್ವಾಮಿ ಮನವಿ ಮಾಡಿದ್ದಾರೆ. ದೇಶದ ಎಲ್ಲ ರಾಜ್ಯಗಳ ಕೃಷಿ ಸಚಿವರೊಂದಿಗೆ ನಡೆದ, ವಿಡಿಯೋ ಸಂವಾದದಲ್ಲಿ ಅವರು ಪಾಲ್ಗೊಂಡಿದ್ದರು.

<><><>

**ಸಿರಿಧಾನ್ಯಗಳ ಮೌಲ್ಯವರ್ಧಿತ ಉತ್ಪನ್ನಗಳ** ಮೇಲಿನ ಜಿ.ಎಸ್.ಟಿ.ಯನ್ನು ಶೇಕಡ 18 ರಿಂದ 5ಕ್ಕೆ ಇಳಿಸುವುದು, ರಾಜ್ಯದ ಲವಣಯುಕ್ತ ಕ್ಷಾರೀಯ ಮಣ್ಣುಗಳ ಪುನಃಶ್ಚೇತನಕ್ಕೆ ಹೊಸ ಯೋಜನೆ ಪ್ರಾರಂಭಿಸುವಂತೆ, ಸಚಿವರು ಕೋರಿದರು.

<><><>

**ಕ್ಲಸ್ಟರ್ ಆಧಾರಿತ ರೈತ ಉತ್ಪಾದಕ** ಸಂಸ್ಥೆಗಳು ಮತ್ತು ಅಗ್ರಿ–ಟೆಕ್ ಸ್ಟಾರ್ಟ್‌ಅಪ್ ಮೂಲಕ, ಕೋಲ್ಡ್ ಚೈನ್ ಅಭಿವೃದ್ಧಿ ಪಡಿಸಿ, ರಫ್ತು ಉತ್ತೇಜಿಸಲು ಮನವಿ ಸಲ್ಲಿಸಿದರು.

<><><>

**ರಾಜ್ಯದ ಎಲ್ಲ ಜಿಲ್ಲಾ ವಿಜ್ಞಾನ ಕೇಂದ್ರಗಳ ಅಭಿವೃದ್ಧಿಗೆ** ಒತ್ತು ನೀಡಲಾಗುತ್ತಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ಖಾತೆ ಸಚಿವ ಎನ್.ಎಸ್. ಬೋಸರಾಜು ತಿಳಿಸಿದ್ದಾರೆ. ಕೊಪ್ಪಳದ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಕ್ಕೆ ಭೇಟಿ ನೀಡಿ, ಸಚಿವರು ಮಾತನಾಡಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ, ಶೇಕಡ 50 ರಷ್ಟು ಸಮಪಾಲು ಅನುದಾನದಡಿ, ರಾಯಚೂರು, ಯಾದಗಿರಿ ಮತ್ತು ಮಂಗಳೂರಿನಲ್ಲಿ ಅತ್ಯುತ್ತಮ ವಿಜ್ಞಾನ ಕೇಂದ್ರಗಳನ್ನು ರೂಪಿಸಲಾಗುತ್ತಿದೆ ಎಂದರು. 'ಸೈನ್ಸ್ ಲ್ಯಾಬ್ ಆನ್ ವ್ಹೀಲ್ಸ್' ಪರಿಕಲ್ಪನೆ ಅಡಿ, ಸಂಚಾರಿ ವಾಹನಗಳ ಮೂಲಕ, ಸರ್ಕಾರಿ ಶಾಲೆಗಳಿಗೆ ತೆರಳಿ, ವಿಜ್ಞಾನ ವಿಷಯದ ಕುರಿತು, ಮಕ್ಕಳಲ್ಲಿ ಆಸಕ್ತಿ ಮೂಡಿಸಲು, ಯೋಜಿತ ಪ್ರಯತ್ನ ನಡೆದಿದೆ ಎಂದು ಸಚಿವರು ಹೇಳಿದರು.

<><><>

**ಆನ್ಲೈನ್ ಜೂಜು ಮತ್ತು ಗೇಮಿಂಗ್‌ಗೆ** ರಾಜ್ಯಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶದ ಹಲವು ಯುವಜನರು, ಹಣ ಕಳೆದುಕೊಂಡು ಮೋಸಹೋಗಿದ್ದಾರೆ. ಕೆಲವರು ಪ್ರಾಣ ಸಹ ತೆತ್ತಿದ್ದಾರೆ. ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯ ಉಪ ಪೊಲೀಸ್ ವರಿಷ್ಠಾಧಿಕಾರಿ ಜಗದೀಶ ಸುತಾರ, ಹಲವು ಶಾಲೆ–ಕಾಲೇಜುಗಳಿಗೆ ತೆರಳಿ, ಆನ್ಲೈನ್ ಹಣ ಹೂಡುವ ಆಟಗಳಲ್ಲಿ ತೊಡಗಿಸಿಕೊಳ್ಳದಂತೆ, ಜಾಗ್ರತಿ ಮೂಡಿಸುತ್ತಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಅವರು ಈ ಬಗ್ಗೆ ಮಾಹಿತಿ ನೀಡಿದ್ದಾರೆ.

<><><>

**ಮಂಗಳೂರಿನಲ್ಲಿ, ರಾಷ್ಟ್ರೀಯ ತನಿಖಾ ದಳ – ಎನ್.ಐ.ಎ.** ಘಟಕ ಸ್ಥಾಪಿಸುವಂತೆ, ಕೇಂದ್ರ ಗೃಹ ಖಾತೆ ಸಚಿವ ಅಮಿತ್ ಶಾ ಅವರಿಗೆ, ಮನವಿ ಮಾಡಿದ್ದಾಗಿ ದಕ್ಷಿಣ ಕನ್ನಡ ಸಂಸದ ಬ್ರಿಜೇಶ್ ಚೌಟ ಹೇಳಿದ್ದಾರೆ. ಕರಾವಳಿ ತೀರದ ಸುರಕ್ಷತೆ ದೃಷ್ಟಿಯಿಂದ, ಭಾರತೀಯ ತಟ ರಕ್ಷಕ ಪಡೆ ಅಕಾದೆಮಿ ಸ್ಥಾಪನೆ, ಸೈನಿಕ ಶಾಲೆ ಹಾಗೂ ಮಿಲಿಟರಿ ನೆಲೆಗೆ ಅವಕಾಶ ಕಲ್ಪಿಸುವಂತೆ ಮನವಿ ಮಾಡಿದ್ದು, ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು, ಸಂಸದ ಚೌಟ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

<><><>

**ಕೋಲಾರ ಜಿಲ್ಲೆ, ಬಂಗಾರಪೇಟೆ ತಾಲೂಕು,** ದಾಸರ ಹೊಸಹಳ್ಳಿಯಲ್ಲಿ ಅಂಗನವಾಡಿ ಕಟ್ಟಡದ ಮೇಲ್ಛಾವಣಿ ಕುಸಿದು, ನಾಲ್ವರು ಮಕ್ಕಳಿಗೆ ಗಾಯಗಳಾಗಿವೆ. ಬಂಗಾರಪೇಟೆ ಆಸ್ಪತ್ರೆಯಲ್ಲಿ ಮಕ್ಕಳಿಗೆ ಚಿಕಿತ್ಸೆ ನೀಡಲಾಗಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ.

<><><>

**ಬೆಂಗಳೂರು ಚಿತ್ರಕಲಾ ಪರಿಷತ್‌ನಲ್ಲಿ ಇಂದು,** 22ನೇ ಚಿತ್ರಸಂತೆ ಏರ್ಪಡಿಸಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಬೆಳಗ್ಗೆ 10.30ಕ್ಕೆ ಉದ್ಘಾಟಿಸಲಿದ್ದಾರೆ ಎಂದು, ಪ್ರವಾಸೋದ್ಯಮ ಖಾತೆ ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಚಿತ್ರಕಲಾ ಪರಿಷತ್‌ನಲ್ಲಿ ಆಯೋಜಿಸಿದ್ದ, ಚಿತ್ರಕಲಾ ಸಮ್ಮಾನ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ, ಐವರು ಸಾಧಕರಿಗೆ, ತಲಾ 50 ಸಾವಿರ ರೂಪಾಯಿ ಹಾಗೂ ಪ್ರಶಸ್ತಿ ಪ್ರದಾನ ಮಾಡಿ, ಮಾತನಾಡಿದರು. 14 ವಿಶೇಷ ಗ್ಯಾಲರಿಗಳನ್ನು ರೂಪಿಸಲಾಗಿದ್ದು, ಚಿತ್ರ ಕಲಾವಿದರನ್ನು ಪ್ರೋತ್ಸಾಹಿಸಲು ಹಾಗೂ ಮಾರುಕಟ್ಟೆ ಕಲ್ಪಿಸುವ ಉದ್ದೇಶದಿಂದ ಉಚಿತವಾಗಿ ಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ ಎಂದರು.

<><><>

**ಚಿತ್ರಕಲಾ ಪರಿಷತ್ತಿನ ಅಧ್ಯಕ್ಷ** ಬಿ.ಎಲ್. ಶಂಕರ್ ಮಾತನಾಡಿ, ಇಂದು ನಡೆಯಲಿರುವ ಚಿತ್ರಸಂತೆಗೆ 22 ರಾಜ್ಯಗಳಿಂದ, 3 ಸಾವಿರದ 470 ಕಲಾವಿದರು ಅರ್ಜಿ ಸಲ್ಲಿಸಿದ್ದರು. ಆಯ್ದ, ಸಾವಿರದ ಐನೂರು ಜನ ಕಲಾವಿದರಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ ಎಂದರು.

<><><>

**ಇಂದು ರಾಷ್ಟ್ರೀಯ ಪಕ್ಷಿ ದಿನ.** ಧಾರವಾಡದ ನೇಚರ್ ರಿಸರ್ಚ್ ಸೆಂಟರ್, ಹುಬ್ಬಳ್ಳಿಯ ಪಕ್ಷಿಮಿತ್ರರ ಸಂಘ, ವಿಜಯನಗರದ ನಾರ್ಥ್ ಕರ್ನಾಟಕ ಬರ್ಡ್‌ಸ್ ಅಸೋಸಿಯೇಷನ್ ಸೇರಿದಂತೆ, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸಾಯಿಟಿ ಸಹಯೋಗದಲ್ಲಿ, ಇಂದು ಹಲವೆಡೆ ವಲಸೆ ಪಕ್ಷಿ ಮತ್ತು ಸ್ಥಳೀಯ ಹಕ್ಕಿಗಳ ವೀಕ್ಷಣೆಗೆ, ಸಮೀಕ್ಷೆಗೆ ಪಕ್ಷಿಪ್ರಿಯರು ಮುಂದಾಗಿದ್ದಾರೆ.

<><><>

**ಮಂಡ್ಯ ಜಿಲ್ಲೆಯ, ಪ್ರಸಿದ್ಧ ಪಕ್ಷಿ ತಾಣ** ಕೊಕ್ಕರೆ ಬೆಳ್ಳೂರಿಗೆ, ಈ ಬಾರಿಯ ಚಳಿಗಾಲಕ್ಕೆ, ನಿರೀಕ್ಷಿತ ಪ್ರಮಾಣದಲ್ಲಿ, ಹೆಜ್ಜಾರ್ಲೆ – ಸ್ಪಾಟ್ ಬಿಲ್ಡ್ ಹಾಗೂ ಯೂರೇಷಿಯನ್ ಪೆಲಿಕನ್ ಪಕ್ಷಿಗಳು ಆಗಮಿಸಿಲ್ಲ ಎನ್ನುತ್ತಾರೆ ಸ್ಥಳೀಕರು. ದೊಡ್ಡ ಮರಗಳ ಹನನದಿಂದ, ಸುತ್ತಲಿನ ಆವಾಸ ಸ್ಥಾನವೇ ಕಳೆದು ಹೋಗಿದ್ದು, ಬಹುತೇಕ ಪಕ್ಷಿಗಳು ಕೇವಲ 'ವಿಶ್ರಾಂತಿ ಸ್ಥಳ', ಸ್ಟಾಪ್ ಓವರ್ ಪಾಯಿಂಟ್ ಆಗಿ ಬಳಸಲು, ಪ್ರಾರಂಭಿಸಿವೆ ಎನ್ನುತ್ತಾರೆ ಪಕ್ಷಿ ತಜ್ಞರು.

<><><>

**ಕಳೆದ ನಾಲ್ಕು ದಶಕಗಳಿಗಿಂತ ಹೆಚ್ಚುಕಾಲ,** ಹೆಜ್ಜಾರ್ಲೆಗಳ ಸಂರಕ್ಷಣೆಯಲ್ಲಿ ತೊಡಗಿರುವ ಕೊಕ್ಕರೆಬೆಳ್ಳೂರಿನ, ಹೆಜ್ಜಾರ್ಲೆ ಸಂರಕ್ಷಣಾ ಬಳಗದ ಅಧ್ಯಕ್ಷ, ಬಿ. ಲಿಂಗೇಗೌಡರು, ಜನವರಿ ಎರಡನೇ ವಾರದ ವೇಳೆಗೆ, ಪೇಂಟೆಡ್ ಸ್ಟಾರ್ಕ್, ಬಣ್ಣದ ಕೊಕ್ಕರೆಗಳು ಹಾಗೂ ಕೆಲ ಐಬಿಸ್‌ಗಳ ಆಗಮನದಿಂದ, ವಾತಾವರಣಕ್ಕೆ ತುಸು ಕಳೆ ಬರಬಹುದು, ಎನ್ನುತ್ತಾರೆ.

<><><>

**ಭಾರತೀಯ ಹವಾಮಾನ ಇಲಾಖೆಯ,** 150 ವರ್ಷಗಳ ಸಾರ್ಥಕ ಸೇವೆಯ ಸ್ಮರಣೆಗಾಗಿ, ಇಲಾಖೆಯ ಕಾರ್ಯಗಳ ಬಗ್ಗೆ, ಜನ ಜಾಗ್ರತಿ ಮೂಡಿಸಲು, ವಿಶೇಷ ಸಭೆಗಳನ್ನು ಆಯೋಜಿಸಲಾಗುವುದು ಎಂದು, ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣಾ ನಿಗಮದ ನಿರ್ದೇಶಕ, ಭೋಯರ್ ಹರ್ಷಲ್ ನಾರಾಯಣ ರಾವ್ ಹೇಳಿದ್ದಾರೆ. ಬೆಂಗಳೂರಿನ ಹವಾಮಾನ ಕೇಂದ್ರದಲ್ಲಿ ಏರ್ಪಡಿಸಲಾಗಿದ್ದ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು. ಭಾರತೀಯ ಹವಾಮಾನ ಇಲಾಖೆ ಐದು ಕಡೆಗಳಲ್ಲಿ ಹೊಸ ರಾಡಾರ್‌ಗಳನ್ನು ಅಳವಡಿಸಲು, ಚಿಂತನೆ ನಡೆಸಿದೆ ಎಂದರು.

<><><>

**ದಕ್ಷಿಣ ಭಾರತದ ಕುಂಭ ಮೇಳ** ಎಂದೇ ಪ್ರಸಿದ್ಧವಾದ, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥೋತ್ಸವ, 15ನೇ ತಾರೀಖು ಜರುಗಲಿದೆ ಎಂದು, ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ.

<><><>

**ಮೈಸೂರಿನ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದಲ್ಲಿ,** ಕೇಂದ್ರ ಗೃಹ ಸಚಿವಾಲಯ ಆಯೋಜಿಸಿದ್ದ, 'ದಕ್ಷಿಣ ಹಾಗೂ ನೈಋತ್ಯ ವಿಭಾಗದ ಅಧಿಕೃತ ಭಾಷಾ ಸಮ್ಮೇಳನ ಹಾಗೂ ಪ್ರಶಸ್ತಿ ಪ್ರದಾನ' ಕಾರ್ಯಕ್ರಮವನ್ನು, ಬಿಹಾರ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಉದ್ಘಾಟಿಸಿದರು.

<><><>

**ಬಾಗಲಕೋಟೆ ಜಿಲ್ಲೆ, ಮುಧೋಳದಲ್ಲಿ,** ರನ್ನ ವೈಭವ ಫೆಬ್ರವರಿ 22 ರಿಂದ 24ರ ವರೆಗೆ ಜರುಗಲಿದೆ ಎಂದು, ಜಿಲ್ಲಾಧಿಕಾರಿ ಕೆ.ಎಂ. ಜಾನಕಿ ತಿಳಿಸಿದ್ದಾರೆ.

<><><>

**ಧಾರವಾಡ ಜಿಲ್ಲೆ ಹುಬ್ಬಳ್ಳಿಯ ನವನಗರದ,** ಕಾನೂನು ವಿಶ್ವವಿದ್ಯಾಲಯದಲ್ಲಿ, 10ನೇ ರಾಷ್ಟ್ರೀಯ ಕಲ್ಪಿತ ನ್ಯಾಯಾಲಯ ಸ್ಪರ್ಧೆಗೆ, ಉಚ್ಚ ನ್ಯಾಯಾಲಯದ ವಿಶ್ರಾಂತ ನ್ಯಾಯಮೂರ್ತಿ ಬಿ.ಎ. ಪಾಟೀಲ ಚಾಲನೆ ನೀಡಿದರು.

<><><>

**ಮಂಗಳೂರಿನಲ್ಲಿ ಮೊದಲ** ಬಾರಿಗೆ ಆಯೋಜಿತ, ಎರಡು ದಿನಗಳ ಅಂತಾರಾಜ್ಯ ಗೆಡ್ಡೆ, ಗೆಣಸು ಹಾಗೂ ಸೊಪ್ಪಿನ ಮೇಳಕ್ಕೆ, ಉಪ್ಪಳ ಕೊಂಡೆವೂರು ಮಠದ ಯೋಗಾನಂದ ಸರಸ್ವತಿ ಸ್ವಾಮೀಜಿ ಚಾಲನೆ ನೀಡಿದರು.

<><><>

**ದಾವಣಗೆರೆಯಲ್ಲಿ ಇಂದು ಮತ್ತು ನಾಳೆ,** ರಾಜ್ಯ ಮಟ್ಟದ ಯುವ ಜನೋತ್ಸವ ನಡೆಯಲಿದೆ.

<><><>

**ಧಾರವಾಡ ರಂಗಾಯಣ,** ಪಂಡಿತ ಬಸವರಾಜ ರಾಜಗುರು ಬಯಲು ರಂಗಮಂದಿರದಲ್ಲಿ, ನಾಡಿದ್ದು 7ನೇ ತಾರೀಖಿನ ವರೆಗೆ, ಸಂಜೆ 6 ಗಂಟೆಗೆ, "ರಂಗಾಯಣ ನಾಟಕೋತ್ಸವ" ಆಯೋಜಿಸಿದೆ.

<><><>

- **ಬೀಜೋತ್ಪಾದನಾ ಕೇಂದ್ರ ಹಾಗೂ** ಗುಣಮಟ್ಟ ನಿರ್ಧರಣೆ ಪ್ರಯೋಗಾಲಯ ಬಲಪಡಿಸಲು, ಕೇಂದ್ರ ಕೃಷಿ ಸಚಿವರಿಗೆ, ರಾಜ್ಯದಿಂದ ಮನವಿ.
- **ಜಿಲ್ಲಾ ವಿಜ್ಞಾನ ಕೇಂದ್ರಗಳ ಅಭಿವೃದ್ಧಿಗೆ,** ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ, ಸಮಗ್ರ ಯೋಜನೆ.
- **ಬೆಂಗಳೂರು ಚಿತ್ರಕಲಾ ಪರಿಷತ್‌ನಲ್ಲಿ,** ಮುಖ್ಯಮಂತ್ರಿ ಇಂದು, 22ನೇ ಚಿತ್ರಸಂತೆಗೆ ಚಾಲನೆ.
- **ಇಂದು ರಾಷ್ಟ್ರೀಯ ಪಕ್ಷಿ ದಿನ;** ವಲಸೆ ಪಕ್ಷಿ ಮತ್ತು ಸ್ಥಳೀಯ ಹಕ್ಕಿಗಳ ವೀಕ್ಷಣೆಗೆ, ಹಲವೆಡೆ ವ್ಯವಸ್ಥೆ.

<><><>

**ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.**

<><><>

**ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.**

<><><>